ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ನನ್ನ ಪ್ರವಾಸದ ಬಗ್ಗೆ ಕೇಳುತ್ತಿದ್ದಾರೋ ಅಥವಾ ಸಿ.ಐ.ಎ. ಏಜೆಂಟ್ ಬಗ್ಗೆ ಕೇಳುತ್ತಿದ್ದಾರೋ ಗೊತ್ತಿಲ್ಲ. ನಾನೂ ಪ್ರವಾಸ ಮಾಡಿದ ಬಗ್ಗೆ ಹೇಳುವುದಾದರೆ, ಎರಡು ವರ್ಷದ ಅವಧಿಯಲ್ಲಿ ಒಟ್ಟು ೩೧೭ ದಿವಸ ನಾನು ಪ್ರವಾಸದ ಮೇಲೆ ಇದ್ದೇನೆ. ಆದರಲ್ಲಿ ೬೮ ದಿವ ರಾಜ್ಯದಲ್ಲಿ ಪ್ರವಾಸ ಮಾಡಿದ್ದೇನೆ. ಇನ್ನು ಉಳಿದ ದಿನಗಳಲ್ಲಿ ರಾಜ್ಯದ ಹೊರಗಡೆ ಪ್ರವಾಸ ಮಾಡಿದ್ದೇನೆ. ಇದರ ಬಗ್ಗೆ ನಾವು ಕೊಟ್ಟಿರುವ ಮಾಹಿತಿಯೊಳಗೆ ಸ್ಪಷ್ಟವಾಗಿದೆ. ಯಾವತ್ತೂ ರಾಜ್ಯದಲ್ಲಿ ಪ್ರವಾಸ ಮಾಡಬೇಕು ಯಾವ ಕಾರಣಕ್ಕೆ ರಾಜ್ಯದ ಹೊರಗಡೆ ಪ್ರವಾಸ ಮಾಡಬೇಕು ಎಂಬುದನ್ನು ತಿಳಿಯತಕ್ಕಂಥ ಬುದ್ಧಿ ನನಗಿದೆ. ರಾಜ್ಯದೊಳಗೆ ಪ್ರವಾಸ ಮಾಡತಕ್ಕ ಅಗತ್ಯ ಕಂಡಾಗ ರಾಜ್ಯದೊಳಗೆ ಪ್ರವಾಸ ಮಾಡಿದ್ದೇನೆ. ರಾಜ್ಯದ ಹೊರಗಡೆ ಹೋಗಬೇಕಾದ ಅಗತ್ಯ ಇದ್ದಾಗ ರಾಜ್ಯದ ಹೊರಗಡೆ ಹೋಗಿದ್ದೇನೆ. ಮಾನ್ಯ ಅಡ್ಯಂತಾಯರಿಗೆ ಸಿ.ಐ.ಎ. ಭೂತ ಹಿಡಿದ ಹಾಗೆ ಕಾಣುತ್ತದೆ. ಹೊರಗಡೆ ಹೋದಾಗ ನಾನು ಕೆಲವು ಪ್ರೆಸ್ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದುದು ನಿಜ. ಆದರೆ ದೇಶದ ಸಮಗ್ರತೆಗಾಗಲೀ, ದೇಶದ ಸ್ವಾತಂತ್ರ್ಯದ ಬಗ್ಗೆ ಗಂಡಾಂತರ ಬರತಕ್ಕಂಥ ವಿಷಯದಲ್ಲಿ ನಾನು ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಪಾಕಿಸ್ತಾನದಿಂದ ನಿಮ್ಮ ದೇಶಕ್ಕೆ ಏನಾದರೂ ಗಂಡಾಂತರ ಇಡಿಯೇ ಎಂದು ಕೇಳಿದ ಪ್ರಶ್ನೆಗೆ ಅಂಥ ಗಂಡಾಂತರ ಯಾವುದೂ ಇಲ್ಲವೆಂದು ನಾನು ಹೇಳಿದ್ದೇನೆ. ಅದು ನಿಜ. ಇವತ್ತೂ ಕೂಡ ನಾನು ಅದನ್ನೇ ಹೇಳುತ್ತೇನೆ. ಅಕಸ್ಮಾತ್ ಪಾಕಿಸ್ತಾನದವರು ನಮ್ಮ ದೇಶದ ಮೇಲೆ ಯುದ್ಧ ಮಾಡಿದರೆ, ಹಿಂದೆ ಯಾವ ರೀತಿ ಮೂರು ಸಲ ಅವರನ್ನು ಸೋಲಿಸಿದ್ದೆವೋ ಅದಕ್ಕಿಂತ ಉತ್ತಮವಾದ ರೀತಿಯಲ್ಲಿ ಅವರನ್ನು ಸೋಲಿಸತಕ್ಕಂಥ ತಾಕತ್ತು ನಮ್ಮಲ್ಲಿ ಇದೆ. ಆದ್ದರಿಂದ ಇದರಲ್ಲಿ ಸಿ.ಐ.ಎ. ವಿಷಯ ಏಕೆ ಬಂತು ಎಂಬುದು ಗೊತ್ತಾಗಲಿಲ್ಲ. ಕಾಂಗ್ರೆಸ್‌ನವರಿಗೆ ರಷ್ಯಾನೇ ಇನವಿಯಿಂದಲೂ ಸಿ.ಐ.ಎ. ಭೂತ ಹಿಡಿದಿರುವುದು ನಿಜ. ನಾನು ದೇಶದ ವಿರುದ್ಧವಾಗಿ ಮಾತನಾಡಿಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮುಖ್ಯ ಮಂತ್ರಿಯವರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. Pakistan is openly abetting and encouraging the terrorists and their activities. Even no less a person than the Director General of Border Security Force and the Inspector General of Police have of such said.

(Interruption)

ಅಧ್ಯಕ್ಷರು.—ಮಾನ್ಯ ಅಡ್ಯಂತಾಯರವರೇ ನೀವು ಉಪ ಪ್ರಶ್ನೆಯನ್ನು ಮಾತ್ರ ಕೇಳಿ. ನೀವು ಪಾಕಿಸ್ತಾನದ ವಿಷಯವನ್ನು ತೆಗೆಯಬಾರದಾಗಿತ್ತು. ಆದರೂ ಅವರು ಸೌಜನ್ಯದಿಂದ ಉತ್ತರ ಕೊಟ್ಟಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಡ್ಯಂತಾಯ ಅವರು ಪಾರ್ಲಿಮೆಂಟಿಗೆ ಹೋಗಿ ಈ ಪ್ರಶ್ನೆಯನ್ನು ಕೇಳಲಿ. ಅಲ್ಲಿ ಸರಿಯಾದ ಉತ್ತರ ಸಿಕ್ಕುತ್ತದೆ.

ನಂಜನಗೂಡಿನಲ್ಲಿರುವ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವುದು.

೧೫೭. ಶ್ರೀ ಡಿ. ಜಯಕುಮಾರ್ (ನಂಜನಗೂಡು).—ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡಿನಲ್ಲಿ ನ್ಯಾಯಾಲಯಕ್ಕಾಗಿ ನಿರ್ಮಿಸಲಾಗುತ್ತಿದ್ದ ಕಟ್ಟಡದ ಕೆಲಸ ಒಂದರೆ ವರ್ಷದ ಹಿಂದೆಯೇ ಪೂರ್ಣಗೊಂಡಿದ್ದರೂ ನ್ಯಾಯಾಲಯವನ್ನು ಸದರಿ ಸ್ಥಳದಲ್ಲಿ ಪ್ರಾರಂಭಿಸದಿರಲು ಕಾರಣಗಳೇನು ?

ಆ) ಈಗಲಾದರೂ ಅಲ್ಲಿ ನ್ಯಾಯಾಲಯವನು ನಡೆಸಲು ಸರ್ಕಾರವು ಕ್ರಮಗಳನ್ನು ಕೈಗೊಳ್ಳುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರು ಸಂಸದೀಯ ವ್ಯವಹಾರಗಳ ಸಚಿವರು).—

ಅ) ನ್ಯಾಯಾಲಯ ಕಟ್ಟಡ ಸಿದ್ಧವಿದ್ದರೂ, ಪೀಠೋಪಕರಣ ಮೇದಿ ಮುಂತಾದವುಗಳು ಇಲ್ಲದಿದ್ದುರಿಂದ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಆಗಲಿಲ್ಲ.

ಆ) ಹೌದು ಲಭ್ಯವಿರುವ ಪೀಠೋಪಕರಣಗಳೊಂದಿಗೆ ನ್ಯಾಯಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲು ಉಚ್ಚ ನ್ಯಾಯಾಲಯವನ್ನು ಕೋರಲಾಗುವುದು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನಂಜನಗೂಡಿನಲ್ಲಿ ಜನತಾ ನ್ಯಾಯಾಲಯದ ಪ್ರಾರಂಭೋತ್ಸವಕ್ಕೆ ಬಂದಿದ್ದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಒಂದು ನಿರ್ದಿಷ್ಟವಾದಂಥ ನಿರ್ದೇಶನವನ್ನು ನೀಡಿದ್ದರು. ಈಗಾಗಲೇ ನಂಜನಗೂಡಿನಲ್ಲಿ ನ್ಯಾಯಾಲಯಕ್ಕಾಗಿ ಬಿಲ್ಡಿಂಗ್ ಕಟ್ಟಿ ಒಂದು ವರ್ಷವಾಗಿದೆ. ಈಗಿರತಕ್ಕ ಪೀಠೋಪಕರಣಗಳನ್ನೇ ಆ ಕಟ್ಟಡದಲ್ಲಿ ಹಾಕಿ ಹೊಸ ಕಟ್ಟಡವನ್ನು ಪ್ರಾರಂಭೋತ್ಸವವನ್ನು ಮಾಡಬೇಕೆಂದು ಆದೇಶ ನೀಡಿದ್ದರೂ ಕೂಡ ಅಧಿಕಾರಿಗಳೂ ಆ ಆದೇಶವನ್ನು ಪಾಲಿಸಲಿಲ್ಲ. ಕಟ್ಟಡವು ಮಳೆಗಾಳಿಗೆ ಸಿಕ್ಕಿ ಮೇಂಟೆನೆನ್ಸ್ ಇಲ್ಲದೆ ಹಾಳಾಗುತ್ತಿದೆ. ದಯವಿಟ್ಟು ಕೂಡಲೇ ಅಧಿಕಾರಿಗಳಿಗೆ ಆದೇಶವನ್ನು ನೀಡಿ ಈಗ ಕಟ್ಟಿರತಕ್ಕ ಹೊಸ ಕಟ್ಟಡವನ್ನು ಉಪಯೋಗಿಸಬೇಕೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಜೊತೆಗೆ ಈಗಾಲೇ ಅಪಲೇಟ್ ಟ್ರಿಬ್ಯೂನಲ್ ಕಛೇರಿಗೆ ಸ್ಥಳ ಇಲ್ಲದೆ ಬಿ ಡಿ.ಓ. ಕಛೇರಿಯಲ್ಲಿ ತನ್ನ ಕೆಲಸವನ್ನು ಮಾಡ ಬೇಕಾಗಿ ಬಂದಿದೆ. ಈಗ ಕಟ್ಟಿರುವ ಹೊಸ ಕಟ್ಟಡಕ್ಕೆ ನ್ಯಾಯಾಲಯವನ್ನೂ ವರ್ಗಾವಣೆ ಮಾಡುವುದರಿಂದ ಹಳೆಯ ಕಟ್ಟಡ ಖಾಲಿ ಆಗುತ್ತದೆ. ಈ ಖಾಲಿಯಾಗುವ ಕಟ್ಟಡದಲ್ಲಿ ಅಪಲೇಟ್ ಟ್ರಿಬ್ಯೂನಲ್ ಕಛೇರಿಯನ್ನು ನಡೆಸಬಹುದು. ಮಾನ್ಯ ಮಂತ್ರಿಯವರು ಈ ಕೆಲಸವನ್ನು ಆದಷ್ಟು ಬೇಗ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಳೆಯ ಕಟ್ಟಡದಿಂದ ಹೊಸ ಕಟ್ಟಡಕ್ಕೆ ಬೇಗ ನ್ಯಾಯಾಲಯವನ್ನು ವರ್ಗಾವಣೆ ಮಾಡುವ ಕೆಲಸವನ್ನು ಮಾಡಬೇಕೆಂದು ನಾನು ಹೈಕೋರ್ಟಿನವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ರಾಯಚೂರಿನಲ್ಲಿರುವ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ

೧೪೮೮. ಶ್ರೀ ಮಹಮ್ಮದ್ ಉಮರ್ (ರಾಯಚೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ರಾಯಚೂರು ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಗಳನ್ನು ಯಾವಾಗ ಹೆಚ್ಚಿಸುವುದು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಆಯವ್ಯಯದಲ್ಲಿ ಸಾಕಷ್ಟು ಹಣ ಲಭ್ಯವಾದಾಗ

SRI MOHAMED OMAR.—I want a particular date within which the Government would increase the bed strength in the Civil Hoipital at Raichur.

ಶ್ರೀ ಬಿ. ರಾಚಯ್ಯ.—ಬೆಡ್‌ಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ನಿರ್ದಿಷ್ಟವಾದ ದಿನಾಂಕವನ್ನು ಕೊಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಆದಕ್ಕೆ ಬೇಕಾಗತಕ್ಕಂಥ ಅಡಿಷನಲ್ ರಿಕ್ವಾಯರ್‌ಮೆಂಟ್ ಏನೇನು ಬೇಕಾಗುತ್ತದೆ ಎಂಬುದನ್ನು ನೋಡಿಕೊಂಡು ಒಂದು ಲೆಕ್ಕಾಚಾರವನ್ನು ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಆಲ್ಲಿ ೨೨೦ ಬೆಡ್‌ಗಳು ಇದೆ. ಅವನ್ನು ೦೬೦ ಬೆಡ್‌ಗಳನ್ನಾಗಿ ಮಾಡುವುದಕ್ಕೆ ಲೆಕ್ಕ ಹಾಕಿದರೆ, ಅಂದರೆ ಆದಕ್ಕೆ ಬೇಕಾಗುವ ಸಿಬ್ಬಂದಿ ಇತ್ಯಾದಿಗಳ ಲೆಕ್ಕ ಹಾಕಿದರೆ ೧೯.೪೩ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಹಾಗೆಯೇ ಡಯೆಟ್, ಡ್ರೆಸ್, ಸ್ಟಾಫ್, ಇತ್ಯಾದಿಗಳಿಗೆ ೨೭.೩ ಲಕ್ಷ ರೂಪಾಯಿಗಳ ಬೇಕಾಗುತ್ತವೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಿಬ್ಬಂದಿ ವೇತನಕ್ಕೆ ೮.೭೪ ಲಕ್ಷ ರೂಪಾಯಿ